ಶ್ರೀ ಎಲ್. ಆರ್. ಶಿವರಾಮೇಗೌಡ.—ತಾವು ಸಮಯ ಕೊಟ್ಟರೆ ನನ್ನ ಅಭ್ಯಂತರವಿಲ್ಲ. ಆದರೆ ೭ ದಿನಗಳು ಆದ ಮೇಲೆ ಅವರು ಉತ್ತರ ಕೊಡುವುದರೊಳಗಾಗಿ ರೈತರ ಬಿತ್ತನೆ ಎಲ್ಲಾ ಮುಗಿದು ಹೋಗುತ್ತದೆ. ಆವರಿಗೆ ಆಗ ಗೊಬ್ಬರದ ಅವಶ್ಯಕತೆ ಇರುವುದಿಲ್ಲ. ಆದಕ್ಕಾಗಿ ಮುಂದಕ್ಕೆ ಹಾಕಿಸ್ತಿದ್ದಾರೋ ಅಥವಾ ಬೇರೆ ಯಾವುದಾದರೂ ಕಾರಣ ಇದೆಯೋ ? ಎಂಬುದನ್ನು ಕೇಳುತ್ತಿದ್ದೇನೆ. ಏಕೆಂದರೆ ಇದು ಬಹಳ ಪ್ರಾಮುಖ್ಯತೆಯ ವಿಚಾರ.

MR. SPEAKER.—What is the particular difficulty. Karnataka Agricultural Marketing Federation is located in Bangalore. Is it not ?

ಡಾ : ಹೆಚ್. ಆರ್. ರಾಜು.—ಮಾನ್ಯ ಅಧ್ಯಕ್ಷರೆ, ಉತ್ತರವು ಈಗ ನನ್ನ ಕೈ ಸೇರಿದೆ. ಮಾನ್ಯ ಸದಸ್ಯರಿಗೆ ಆದು ತಲುಪಿರಲಿಕ್ಕಿಲ್ಲ ಎಂದು ಗಾಣುತ್ತದೆ. ನಾಳೆ ತೆಗೆದುಕೊಳ್ಳಿ.

ಅಧ್ಯಕ್ಷರು.—ಆಗಬಹುದು.

ಶ್ರೀ ವಾಟಾಳ್ ನಾಗರಾಜ್ —ಕಾಸರಗೋಡಿನ ವಿದ್ಯಾರ್ಥಿಗಳನ್ನು ನಮ್ಮ ರಾಜ್ಯದಲ್ಲಿ ಶಾಲಾ ಕಾಲೇಜುಗಳಿಗೆ ಸೇರಿಸಿಕೊಳ್ಳುತ್ತಾ ಇಲ್ಲ. ನಾನು ಮತ್ತು ಇನ್ನೂ ಅನೇಕ ಜನ ಸದಸ್ಯರು ಸಹಿ ಮಾಡಿ ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೇವೆ. ಈಗ ಶಾಲಾ ಕಾಲೇಜುಗಳ ಪ್ರವೇಶ ಸಮಯ. ಆದ್ದರಿಂದ ಈ ವಿಚಾರದ ಬಗ್ಗೆ ನಿರ್ಣಯ ಆಗಬೇಕಾಗಿದೆ. ಗಡಿನಾಡಿನ ಕನ್ನಡಿಗರಿಗೆ ಈ ಒಂದು ಸೌಲಭ್ಯವನ್ನು ಒದಗಿಸಿಕೊಡುತ್ತಾ ಇಲ್ಲ. ದಯವಿಟ್ಟು ಅವಕಾಶ ಮಾಡಿಕೊಡಿ.....

ಅಧ್ಯಕ್ಷರು.—ನಾನು ಇನ್ನೂ ನೋಡಿಲ್ಲ. ಅದನ್ನು ನಾನು ನೋಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಈಗ ನಮ್ಮ ಊರನಲ್ಲಿಯು ವಿದ್ಯಾರ್ಥಿಗಳಿಗೇ ನಮ್ಮಲ್ಲಿ ಸೀಟು ಕೊಡುತ್ತಿಲ್ಲ.

ಶ್ರೀ ಟಿ. ಎಂ. ಮಂಜುನಾಥ.—ನಮ್ಮ ಜಿಲ್ಲೆಯಲ್ಲಿ ಐಪಿ ಸೆಟ್‌ಗಳಿಗೆ ವಿದ್ಯುಚ್ಛಕ್ತಿ ಕೊಡ ತಕ್ಕಂಥ ವಿಚಾರದಲ್ಲಿ ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೇನೆ.

ಅಧ್ಯಕ್ಷರು.—ಇವೊತ್ತು ಇಲಾಖೆ ಬೇಡಿಕೆ ಮೇಲೆ ಚರ್ಚೆ ಇದೆ. ಆದರಲ್ಲಿ ತಾವು ಪ್ರಸ್ತಾಪಿಸ ಬಹುದು.

ನಿಯಮ ೩೫೪ರ ಮೇರೆಗೆ

ಅಧ್ಯಕ್ಷರು.—ಶ್ರೀ ಶ್ರೀರಂಗದೇವರಾಯಲು ಅವರು ಶ್ರೀ ಕೆ. ಲಕ್ಕಪ್ಪನವರು...

ಶ್ರೀ ಕೆ. ಲಕ್ಕಪ್ಪ.—ನನಗೆ ನೋಟೀಸ್ ಕಾಪಿ ಕೊಟ್ಟಿಲ್ಲ.

ಅಧ್ಯಕ್ಷರು.—ಸರಿ ಬಿಡಿ. ಶ್ರೀ ಯಡಿಯೂರಪ್ಪನವರು.

ಶ್ರೀ ಬಿ. ಎಸ್. ಯಡಿಯೂರಪ್ಪ.—ನೋಟೀಸ್ ಕಾಪಿ ನನ್ನ ಬಳಿ ಇಲ್ಲ.

ಅಧ್ಯಕ್ಷರು.—ಕಾಪಿ ನೀವು ಇಟ್ಟುಕೊಳ್ಳಬೇಕಾಗಿತ್ತು. ಶ್ರೀ ಕೆ. ಸೋಮಪ್ಪ ಸುವರ್ಣ.

ಶ್ರೀ ಕೆ. ಸೋಮಪ್ಪ ಸುವರ್ಣ.—ನನಗೆ ಪ್ರಶ್ನೋತ್ತರದಲ್ಲಿ ಉತ್ತರ ಬಂದಿರುವುದರಿಂದ ಇದರ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ.

ಅಧ್ಯಕ್ಷರು.—ಸರಿ. ಶ್ರೀ ರಮಾನಾಥ ರೈ ಅವರು.

ಕಾಳಿಂಗ ನಾವಡರವರ ಕುಟುಂಬಕ್ಕೆ ಆರ್ಥಿಕ ಸಹಾಯ

ಶ್ರೀ ರಮಾನಾಥ ರೈ.—ಮಾನ್ಯ ಅಧ್ಯಕ್ಷರೇ, ಯಕ್ಷಗಾನ ಕಲಾ ಜಗತ್ತಿನಲ್ಲಿ ಕಿರಿಯ ಪ್ರಾರಂಭದಲ್ಲಿ ಅಪ್ರತಿಮ ಸೇವೆ ಸಲ್ಲಿಸಿ ಮಧುರ ಕಂಠದ ಹಾಡುಗಾರಿಕೆಯಿಂದ ಕರಾವಳಿ ಜನರ ಮನಸ್ಸನ್ನು ಸೂರೆಗೊಂಡು ಯಕ್ಷಗಾನ ರಂಗದಲ್ಲಿ ಅಪ್ರತಿಮ ಹಾಡುಗಾರನಾಗಿ ಸ್ವತಃ ಯಕ್ಷಗಾನ ಕೃತಿಯನ್ನು ಬರೆದು ಕೇವಲ ೩೫ ವರ್ಷ ವಯಸ್ಸಿನಲ್ಲಿ ಅಪಘಾತಕ್ಕೆ ಒಳಗಾಗಿ ವಿಧಿವಶರಾದಂತಹ ಕಾಳಿಂಗ ನಾವಡ, ಕಷ್ಟದಿಂದ ಇರುವ ಅವರ ಕುಟುಂಬಕ್ಕೆ ಆರ್ಥಿಕವಾಗಿ ಕನ್ನಡ ಸಂಸ್ಕೃತಿ ಇಲಾಖೆಯಿಂದ ಸಹಾಯ ಮಾಡಬೇಕಾಗಿ ನಿಮ್ಮ ಮೂಲಕ ಕೇಳಿಕೊಳ್ಳುತ್ತೇನೆ.